ರಾಜ್ಯದಲ್ಲಿ ಕಾರ್ಖಾನೆಗಳಿಂದ ಪರಿಸರ ಮಾಲಿನ್ಯ.

49 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಕ್ಕರೆ ಜವಳಿ, ವಿಜ್ಞಾನ ಯಂತ್ರಕಲೆ, ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪರಿಸರ ಮಾಲಿನ್ಯ ಉಂಟು ಮಾಡುತ್ತಿರುವ ಎಷ್ಟು ಕಾರ್ಖಾನೆಗಳ ಮೇಲೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರು ಕ್ರಮ ಕೈಗೊಂಡಿರುವರು ಹಾಗೂ ಕೈಗೊಂಡಿರುವ ಕ್ರಮಗಳು ಯಾವುವು?

ಆ) ಬೆಂಗಳೂರಿನಲ್ಲಿ ರಾಜಾಜಿನಗರ ರಾಮಕುಮಾರ್ ಮಿಲ್‌ನಿಂದ ಮತ್ತು 6ನೇ ಬ್ಲಾಕ್ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ರಬ್ಬರ್ ಫ್ಯಾಕ್ಟರಿಯಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ ತಡೆಗೆ ಏನು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಪಿ.ಸಿ. ಸಿದ್ದನಗೌಡ (ಸಕ್ಕರೆ, ಜವಳಿ, ವಿಜ್ಞಾನ, ಯಂತ್ರ ಕಲೆ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆಯಡಿಯಲ್ಲಿ 36 ಮತ್ತು ವಾಯು(ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆಯಡಿಯಲ್ಲಿ 32 ಉದ್ದಿಮೆಗಳ ಮೇಲೆ ಮುಚ್ಚುವ ಆಜ್ಞೆಯನ್ನು ಹೊರಡಿಸಿದೆ. ಜಲ ಕಾಯ್ದೆಯ ಅಡಿಯಲ್ಲಿ 90 ಮತ್ತು ವಾಯು ಕಾಯ್ದೆಯ ಅಡಿಯಲ್ಲಿ 35 ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದೆ. ಇದಲ್ಲದೆ ಹಲವಾರು ಪ್ರತಿ ಬಂಧಿಸುವ ಆಜ್ಞೆಗಳನ್ನು ಸಹಾ ಉದ್ದಿಮೆಗಳಿಗೆ ಹೊರಡಿಸಿದೆ.

ಆ) ರಾಮ್ ಕುಮಾರ್ ಮಿಲ್ಸ್ ಕಾರ್ಖಾನೆಯು ಜಲ ಮಾಲಿನ್ಯವನ್ನು ತಡೆಗಟ್ಟಲು ಸಂಸ್ಕರಣ ಘಟಕಗಳನ್ನು ಅಳವಡಿಸಿದ್ದಾರೆ, ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣ) ಕಾಯ್ದೆ 1981ರ ಅಡಿಯಲ್ಲಿ ಸೂಚಿಸಿರುವ ನಿಗದಿತ ಚಿಮಣಿಗಳನ್ನು ಮತ್ತು ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಉದ್ದಿಮೆಯು ಅಳವಡಿಸಿರುತ್ತದೆ.

ರಬ್ಬರ್ ಫ್ಯಾಕ್ಟರಿ (ಮೈಸೂರು ರಬ್ಬರ್ಸ್)ನಿಂದ ಶಬ್ಧ ಮಾಲಿನ್ಯವು ಪರಿಸರ ಮಾಲಿನ್ಯಕ್ಕೆ ಮುಖ್ಯ ಕಾರಣವಾಗಿರುತ್ತದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ 12-7-95ರಲ್ಲಿ ಕಾರಣ ಕೇಳುವ ನೋಟೀಸನ್ನು ಸದರಿ ಉದ್ದಿಮೆಗೆ ನೀಡಿದ್ದು ಅದರ ವಿರುದ್ಧ ಕ್ರಮ ಕೈಗೊಳ್ಳುವುದು.

ಬೆಂಗಳೂರು ನಗರದಲ್ಲಿ ಪರಿಸರ ಮತ್ತು ವಾಯು ಮಾಲಿನ್ಯ

50 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ಯಂತ್ರಕಲೆ ಹಾಗೂ ಪರಿಸರ ಮತ್ತು ಯಂತ್ರಕಲೆ ಹಾಗೂ ಜೀವಿಶಾಸ್ತ್ರ ಇಲಾಖೆಯ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಮಹಾನಗರದ ಪರಿಸರ ಮತ್ತು ವಾಯು ಮಾಲಿನ್ಯಕ್ಕೆ ಪ್ರಮುಖ ಕಾರಣಗಳಾವುವು ?*

ಆ) *ಪ್ರಸ್ತುತ ಪರಿಸರ ಮತ್ತು ವಾಯು ಮಾಲಿನ್ಯದ ಶೇಕಡವಾರು ಪರಿಸ್ಥಿತಿಯೇನು ?*

ಇ) *ಈ ಮಾಲಿನ್ಯ ತಡೆಗೆ ಸರ್ಕಾರದ ಕಾರ್ಯಕ್ರಮಗಳೇನು ?*

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ಯಂತ್ರಕಲೆ ಹಾಗೂ ಪರಿಸರ ಮತ್ತು ಯಂತ್ರಕಲೆ ಹಾಗೂ ಜೀವಿಶಾಸ್ತ್ರ ಇಲಾಖೆಯ ರಾಜ್ಯ ಸಚಿವರು) :

ಅ) ಬೆಂಗಳೂರು ಮಹಾನಗರದ ಪರಿಸರ ಮತ್ತು ವಾಯು ಮಾಲಿನ್ಯಕ್ಕೆ ಪ್ರಮುಖ ಕಾರಣಗಳೆಂದರೆ ಕಾರ್ಖಾನೆಗಳು, ತೆರೆದ ಚರಂಡಿಗಳಲ್ಲಿ ಹರಿಯುವ ಗೃಹ ಬಳಕೆ ಕಲುಷಿತ ನೀರು, ಹೆಚ್ಚುತ್ತಿರುವ ವಾಹನಗಳ ಸಂಖ್ಯೆ.

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅನಂದರಾವವ್ ವೃತ್ತ, ಅಮ್ಮೊಬ್ಯಾಟರೀಸ್ ಮತ್ತು ಗ್ರಾಫೈಟ್ ಇಂಡಿಯಾ ಈ ಮೂರು ಸ್ಥಳಗಳಲ್ಲಿ ವಾಯುವಿನ ಗುಣಮಟ್ಟವನ್ನು ಮಾಪನ ಮಾಡಲಾಗುತ್ತಿದೆ. 1994-95ರ ಸಾಲಿನ ಗುಣಮಟ್ಟವನ್ನು ಅನುಬಂಧದಲ್ಲಿ ಅಳವಡಿಸಲಾಗಿದೆ.

ಇ) ಕಾನೂನು ರೀತ್ಯ ಕಾರ್ಖಾನೆಗಳಿಂದ, ಹಾಗೂ ಮನೆಗಳಿಂದ ಹೊರಬರುವ ಮಲಿನಗೊಂಡ ನೀರನ್ನು ಎಲ್ಲಾ ತರಹದ ಉಪಕರಣಗಳನ್ನು ಉಪಯೋಗಿಸಿ ಶುದ್ಧೀಕರಿಸಲು ಜಾರಿಗೊಳಿಸಲಾಗಿದೆ. ಶುದ್ಧೀಕರಿಸಿದ ನೀರನ್ನು ಪುನರ್ ಬಳಕೆ ಮಾಡಲು ಎಲ್ಲಾ ಸಂಬಂಧಪಟ್ಟವರಿಗೆ ತಿಳುವಳಿಕೆ ಮತ್ತು ಪಾಲನೆ ಮಾಡಲು ತಿಳಿಸಲಾಗಿದೆ. ನೀರನ್ನು ಮಿತವಾಗಿ ಬಳಸಲು ಕೂಡ ಸಂಬಂಧಪಟ್ಟ ಬಳಕೆದಾರರಿಗೆ ಕ್ರಮ ತೆಗೆದುಕೊಳ್ಳಲು ತಿಳಿಸಲಾಗಿದೆ.

ವಾಯು ಮಲಿನತೆ ಬಗ್ಗೆ ಎಲ್ಲಾ ಕಾರ್ಖಾನೆಗಳಿಗೆ ಆದೇಶ ನೀಡಿ ಕಾಯ್ದೆಯ ಪ್ರಕಾರ ನಿಯಂತ್ರಣ ಮಾಡಬೇಕೆಂದು ತಿಳಿಸಲಾಗಿದೆ. ವಾಹನಗಳ ತಪಾಸಣೆಯನ್ನು ಹೆಚ್ಚಿನ ರೀತಿಯಲ್ಲಿ ನಡೆಸಿ ವಾಹನಗಳಿಂದ ಬರುವ ಮಾಲಿನ್ಯತೆಯನ್ನು ನಿಯಂತ್ರಿಸಲು ಸಹ ಸಾರಿಗೆ ಮತ್ತು ಪೋಲೀಸ್ ಇಲಾಖೆಗೆ ನಿರ್ದೇಶನ ನೀಡಲಾಗಿದೆ.

ಇದೆಲ್ಲಕ್ಕೂ ಮಿಗಿಲಾಗಿ ಜನ ಜಾಗೃತಿ ಕ್ರಮಗಳನ್ನು ಪರಿಸರ ರಕ್ಷಣೆಗಾಗಿ ಹಮ್ಮಿಕೊಳ್ಳಲಾಗಿದೆ.

ಅನುಬಂಧ

ಗಾಳಿಯ ಗುಣಮಟ್ಟವನ್ನು 3 ಜಾಗಗಳಲ್ಲಿ ಮಾಪನ ಮಾಡಲಾಗುತ್ತಿದ್ದು ಅದರ ಅಂಕಿ ಅಂಶಗಳು ಈ ರೀತಿ ಇದೆ.

ಕ್ರ ಸಂ.	*ಸ್ಥಳ*	*ತೇಲಾಡುವ ಧೂಳಿನ ಕಣಗಳು (ವರ್ಷದ ಸರಾಸರಿ)*	*ಗಂಧಕದ ಡೈ ಆಕ್ಸೈಡ್*	*ಸಾರಜನಕದ ಆಕ್ಸೈಡ್*
1	ಆನಂದರಾವ್ ವೃತ್ತ	200 ಎಂಜಿ (140) ಎನ್ ಎಂಕ್ಯೂಬ್	46—(60) ಎಂಜಿ.ಎನ್ ಎಂಕ್ಯೂಬ್	33—(60)
2	ಆಪ್ಕೋ ಬ್ಯಾಟರೀಸ್ ಮೈಸೂರು ರಸ್ತೆ	160 — (140) ಎಂಜಿ:ಎನ್ ಎಂಕ್ಯೂಬ್	33—(60) ಎನ್ ಜಿ.ಎನ್ ಎಂಕ್ಯೂಬ್	07—(60)
3	ಗ್ರಾಫೈಟ್ ಇಂಡಿಯಾ ವೈಟ್ ಫೀಲ್ಡ್ ರಸ್ತೆ	114 — (360) ಎಂಜಿ:ಎನ್ ಎಂಕ್ಯೂಬ್	24—(80) ಎಂಜಿ:ಎನ್ ಎಂಕ್ಯೂಬ್	17—(80)

ಮೈಸೂರು ರಸ್ತೆ ಮತ್ತು ಆನಂದರಾವ್ ವೃತ್ತಗಳಲ್ಲಿ ತೇಲಾಡುವ ಧೂಳಿನ ಕಣಗಳು ನಿಗಧಿಪಡಿಸಿರುವ ಮಾನಕಗಳಿಗಿಂತ ಅಧಿಕವಾಗಿರುತ್ತದೆ. ಇದಕ್ಕೆ ಮುಖ್ಯ ಕಾರಣಗಳು ಹೆಚ್ಚುತ್ತಿರುವ ವಾಹನಗಳ ಸಂಖ್ಯೆ ಹಾಗೂ ರಸ್ತೆಗಳ ಗುಣ ಮಟ್ಟ ಸರಿಯಿಲ್ಲದಿರುವುದು.

(ವಿಶೇಷ ಸೂಚನೆ: ಆವರಣದಲ್ಲಿ ತೋರಿಸಿರುವ ಅಂಕಿಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗಧಿಪಡಿಸಿರುವ ಮಾನಕಗಳಾಗಿರುತ್ತವೆ).